1	2	3
4.	ಉಡುಪಿ	94.35
5.	ತುಮಕೂರು	4.66
6.	ಶಿವಮೊಗ್ಗ	18.00
7.	ದಾವಣಗೆರೆ	2.30
8.	ಚಾಮರಾಜನಗರ	1.35
	ಒಟ್ಟು	185.06

ಅ) ಸ್ವಜಲಧಾರಾ ಯೋಜನೆಯಡಿ ಒಟ್ಟು ರೂ 14.86 ಕೋಟಿ ಮೊತ್ತದ 121 ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಲಾಗಿದೆ.

ಇ) ಕೇಂದ್ರ ಸರ್ಕಾರವು ಮಂಜೂರಾತಿ ನೀಡಿದ ನಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ರಾಜ್ಯದ ಕನ್ನಡ ಸಣ್ಣ ಪತ್ರಿಕೆಗಳಲ್ಲಿನ ಲೇಖನಗಳು

2055(2013) ಶ್ರೀ ಸಭಾಪತಿ ಯು.ಆರ್ (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ ಕನ್ನಡ ಸಣ್ಣ ವಾರ್ತಾ ಪತ್ರಿಕೆಗಳು ಎಷ್ಟು; (ಜಿಲ್ಲಾವಾರು ಸಂಖ್ಯೆಗಳ ವಿವರ ನೀಡುವುದು);

ಆ) ಇತ್ತೀಚೆಗೆ ಕೆಲವು ಸಣ್ಣ ವಾರ್ತಾ ಪತ್ರಿಕೆಗಳು ಅವಾಚ್ಯ ಶಬ್ದಗಳಿಂದ ಚಾರಿತ್ರಹರಣ ಮಾಡಿ ಜನರಿಗೆ ತಪ್ಪು ಮಾಹಿತಿಗಳನ್ನು ನೀಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಸಮಾಲೋಚನೆಯೊಂದಿಗೆ ಪತ್ರಿಕೆಗಳು ಪ್ರಕಟಗೊಳಿಸುವ ಲೇಖನಗಳ ಬಗ್ಗೆ ನೀತಿಸಂಹಿತೆಯೊಂದನ್ನು ರೂಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

ಅ) ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಇರುವಂತೆ ರಾಜ್ಯದಲ್ಲಿ ಇರುವ ಕನ್ನಡ ಸಣ್ಣ ವಾರ್ತಾ ಪತ್ರಿಕೆಗಳ ಸಂಖ್ಯೆ 185.

ಜಿಲ್ಲಾವಾರು ವಿವರ:-

ಬೆಂಗಳೂರು ನಗರ-1, ಬೆಂಗಳೂರು ಗ್ರಾಮಾಂತರ-4, ಬಳ್ಳಾರಿ-4, ಬೀದರ್-8, ಬಿಜಾಪುರ-16, ಬಾಗಲಕೋಟೆ-7, ಬೆಳಗಾವಿ-6, ಚಿತ್ರದುರ್ಗ-10, ಚಿಕ್ಕಮಗಳೂರು-6, ದಾವಣಗೆರೆ-8, ಧಾರವಾಡ-2, ಗದಗ-2, ಗುಲ್ಬರ್ಗಾ-21, ಹಾವೇರಿ-2, ಹಾಸನ-7, ಕೋಲಾರ-6, ಕೊಡಗು-3, ಉತ್ತರ ಕನ್ನಡ ಜಿಲ್ಲೆ-2, ದಕ್ಷಿಣ ಕನ್ನಡ ಜಿಲ್ಲೆ-4, ಮಂಡ್ಯ-5, ಮೈಸೂರು-18, ಚಾಮರಾಜನಗರ-1, ರಾಯಚೂರು-6, ಶಿವಮೊಗ್ಗ-23, ತುಮಕೂರು-9, ಕೊಪ್ಪಳ-4.

ಆ) ಬಂದಿದೆ.

ಇ) ಈಗಾಗಲೇ 1999ರಲ್ಲಿ ಭಾರತೀಯ ಪತ್ರಿಕಾ ಮಂಡಳಿ ಪತ್ರಕರ್ತರಿಗೆ ನೀತಿ ಸಂಹಿತೆ ಪ್ರಕಟಿಸಿದೆ. ಆದಕಾರಣ ಈ ಕುರಿತು ಚಿಂತನೆ ನಡೆಸುವುದು ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ರಾಜ್ಯದಲ್ಲಿ ಜಿಲ್ಲಾ ವಾರ್ತಾ ಇಲಾಖಾ ಕಟ್ಟಡಗಳು

2056(2014) ಶ್ರೀ ಸಭಾಪತಿ ಯು.ಆರ್(ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಾರ್ತಾ ಇಲಾಖೆಯ ಎಷ್ಟು ಜಿಲ್ಲಾ ಕಛೇರಿಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ; (ಜಿಲ್ಲಾವಾರು ವಿವರ ನೀಡುವುದು) ;

ಆ) ಜಿಲ್ಲಾ ವಾರ್ತಾ ಇಲಾಖೆಗಳಿಗೆ ಪ್ರತ್ಯೇಕ ಕಟ್ಟಡ ರಚನೆ ಮಾಡುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಪತ್ರಿಕಾ ಮಾಧ್ಯಮಗಳನ್ನು ಹೆಚ್ಚಿಚ್ಚು ರಚನಾತ್ಮಕ, ಉತ್ತಮ ಸಂದೇಶ ನೀಡಿಕೆಯೊಂದಿಗೆ ಪರಿಣಾಮಕಾರಿಯಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

ಅ) ವಾರ್ತಾ ಇಲಾಖೆಯ ಒಟ್ಟು 14 ಜಿಲ್ಲಾ ಕಛೇರಿಗಳು ಸ್ವತಂತ್ರ ಕಟ್ಟಡಗಳನ್ನು ಹೊಂದಿವೆ. ವಿವರ ಕೆಳಕಂಡಂತಿದೆ.

1. ಚಿತ್ರದುರ್ಗ, 2. ದಾವಣಗೆರೆ, 3. ಶಿವಮೊಗ್ಗ, 4. ಮೈಸೂರು, 5. ಚಿಕ್ಕಮಗಳೂರು, 6. ಮಂಗಳೂರು, 7. ಮಡಿಕೇರಿ, 8. ಮಂಡ್ಯ, 9. ಹಾಸನ, 10. ಬೆಳಗಾವಿ, 11. ಕಾರವಾರ, 12. ಬಿಜಾಪುರ, 13. ಧಾರವಾಡ, 14. ಬಳ್ಳಾರಿ

ಆ) ಸ್ವಂತ ಕಟ್ಟಡಗಳನ್ನು ಹೊಂದದೆ ಇರುವ ಉಳಿದ 13 ಜಿಲ್ಲಾ ಕೇಂದ್ರಗಳ ಪೈಕಿ 1. ತುಮಕೂರು, 2.ಕೋಲಾರ, 3. ಗುಲ್ಬರ್ಗ, 4. ರಾಯಚೂರು, 5. ಬೀದರ್, 6. ಚಾಮರಾಜನಗರ, ಈ ಸ್ಥಳಗಳಲ್ಲಿ ನಿವೇಶನ ಮಂಜೂರಾಗಿದ್ದು, ಚಾಮರಾಜನಗರ ಹಾಗೂ ಬೀದರ್ ಜಿಲ್ಲೆಗಳಲ್ಲಿನ ನಿವೇಶನಗಳು ಇಲಾಖೆಯ ಸ್ವಾಧೀನಕ್ಕೆ ಬಂದಿರುವುದಿಲ್ಲ. ಸ್ವಾಧೀನ ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಮೇಲೆ ತಿಳಿಸಿರುವ ಉಳಿದ ಜಿಲ್ಲಾ ಕೇಂದ್ರಗಳಲ್ಲಿ ಮಂಜೂರಾಗಿರುವ ನಿವೇಶನಗಳನ್ನು ಇಲಾಖೆಯ ಸ್ವಾಧೀನಕ್ಕೆ ಪಡೆದುಕೊಂಡು ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಹಾಗೂ ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದೆ. ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. ತುಮಕೂರಿನಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಕಳೆದ ವರ್ಷವೇ ಪ್ರಾರಂಭವಾಗಿದ್ದು ಪ್ರಗತಿಯಲ್ಲಿದೆ.

ಉಳಿದ 5 ಜಿಲ್ಲೆಗಳಾದ 1. ಉಡುಪಿ, 2.ಕೊಪ್ಪಳ, 3. ಬಾಗಲಕೋಟೆ, 4. ಗದಗ 5. ಹಾವೇರಿ ಇವುಗಳಲ್ಲಿ ನಿರ್ಮಾಣವಾಗಲಿರುವ ಆಯಾ ಜಿಲ್ಲೆಯ ಮಿನಿ ವಿಧಾನಸೌಧ ಅಥವಾ ಜಿಲ್ಲಾಡಳಿತ ಕಛೇರಿಗಳ ಸಂಕೀರ್ಣದಲ್ಲಿ ವಾರ್ತಾ ಇಲಾಖೆಗೆ ಸ್ಥಳಾವಕಾಶ ಮಾಡಿಕೊಳ್ಳಲು ಸಂಬಂಧಿಸಿದ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.